# ಏರೋ ಶೋ–2019 ರಂಗಸನ್ಸ್ ರಕ್ಷಣಾ ಪರಿಹಾರಗಳ ಪ್ರದರ್ಶನ

## ರಕ್ಷಣಾ ಮತ್ತು ಏರೋಸ್ಪೇಸ್ ಡೊಮೇನ್‌ಲ್ಲಿ ವಿಶ್ವದರ್ಜೆಯ ತಂತಜ್ಞಾನ ಉತ್ಪನ್ನಗಳನ್ನು ಪರಿಚಯಿಸಿದ ಕಂಪನಿ ರಂಗಸನ್ಸ್

---

**ಬೆಂಗಳೂರು, ಫೆಬ್ರವರಿ 18, 2019:** ಭಾರತದ ಪ್ರಮುಖ ವೈಮಾನಿಕ ಉತ್ಪನ್ನ ತಂತ್ರಜ್ಞಾನ ಕಂಪನಿ ಆಗಿರುವ ಎನ್‌ಆರ್ ಸಮೂಹದ ರಂಗಸನ್ಸ್ ಡಿಫೆನ್ಸ್ ಸಲ್ಯುಷನ್ಸ್ ಆರ್‌ಡಿಎಸ್ 2019ರ ವೈಮಾನಿಕ ಪ್ರದರ್ಶನದಲ್ಲಿ (ಏರೋ ಶೋ–2019) ಭಾಗವಹಿಸುತ್ತಿದೆ. ಏರೋಸ್ಪೇಸ್, ಡಿಫೆನ್ಸ್ ಮತ್ತು ಹೋಮ್‌ಲ್ಯಾಂಡ್ ಸೆಕ್ಯುರಿಟಿ ಡೊಮೇನ್‌ನಲ್ಲಿ 25 ವರ್ಷಗಳ ಉಪಸ್ಥಿತಿ ಹೊಂದಿರುವ ಮೈಸೂರು ಮೂಲದ ಈ ಕಂಪನಿಯು ಕಾನ್ಸೆಪ್ಟ್, ಪ್ರೊಟೊಟೈಪಿಂಗ್, ಉತ್ಪನ್ನ ಅಭಿವೃದ್ಧಿ, ಮತ್ತು ಪ್ಲಾಟ್‌ಫಾರ್ಮ್ ಏಕೀಕರಣ ಸೇವೆಗಳ ಪ್ರಮಾಣದಲ್ಲಿ ಪರಿಣಿತಿ ಪಡೆದಿದೆ.

ಕಳೆದ ಎರಡೂವರೆ ದಶಕಗಳ ಅವಧಿಯಲ್ಲಿ, ರಂಗಸನ್ಸ್ ಡಿಫೆನ್ಸ್ ಸಲ್ಯುಷನ್ಸ್, ದೇಶದ ರಕ್ಷಣೆಗಾಗಿ ಉನ್ನತ ತಂತ್ರಜ್ಞಾನ ಮತ್ತು ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿದೆ. ಇದು ಗಡಿಭಾಗದ ಚಲನ–ವಲನಗಳ ಮೇಲೆ ನಿಗಾ ಇಡುವ ಮತ್ತು ಮುನ್ಸೂಚನೆ ಕೊಡುವ ಯಾವುದೇ ಏರ್‌ಬೋರ್ನ್ ಕಾಂಪ್ಯಾಕ್ಟ್ ಹೀಟ್ ಎಕ್ಸ್‌ಚೇಂಜರ್ ಅಥವಾ ವಿಶ್ವದ ಅತಿ ಸಣ್ಣ ಎಸ್‌ಓಟಿಎಂ (ಸ್ಯಾಟ್‌ಕಾಮ್ ಆನ್ ದಿ ಮೂವ್) ಟರ್ಮಿನಲ್ ಅನ್ನು ತಯಾರಿಸಿದ ಮೊದಲ ಕಂಪನಿಯಾಗಿದೆ; ರಂಗಸನ್ಸ್‌ನಲ್ಲಿ ಆಂತರಿಕವಾಗಿ ವಿನ್ಯಾಸಗೊಳಿಸಲ್ಪಟ್ಟ ಉತ್ಪನ್ನಗಳು ಮತ್ತು ಸೇವೆಗಳು ಜಾಗತಿಕ ಗುಣಮಟ್ಟ ಹೊಂದಿದ್ದು, ಅಂತರರಾಷ್ಟ್ರೀಯ ಮಾನದಂಡಗಳಿಗೆ ಸಮಾನವಾಗಿರುತ್ತವೆ.

**‘ಏರೋ ಇಂಡಿಯಾ–2019’ನಲ್ಲಿ ಕಾಣಿಸಿಕೊಳ್ಳಲಿರುವ ಕೆಲವು ಮುಖ್ಯವಾದ ಉತ್ಪನ್ನಗಳೆಂದರೆ,** ಸ್ಯಾಟ್‌ಕಾಮ್, ಹೀಟ್ ಎಕ್ಸ್‌ಚೇಂಜರ್, ನೇವಿಕ್ (NAVIC) ರಿಸೀವರ್, ಸಾಫ್ಟ್‌ವೇರ್ ಡಿಫೈನ್ಡ್ ಮೆಶ್ ರೇಡಿಯೋಗಳು ಮತ್ತು ಟ್ಯಾಕ್ಟಿಕಲ್ ಡಾಟಾ ಲಿಂಕ್‌ಗಳು ಇತ್ಯಾದಿ. ಇದಿಷ್ಟೆ ಅಲ್ಲದೆ, ಆರ್‌ಎಫ್/ ಮೈಕ್ರೋವೇವ್, ಅನಲಾಗ್ / ಡಿಜಿಟಲ್, ಎಂಬೆಡೆಡ್ ಸಾಫ್ಟ್‌ವೇರ್, ಅಪ್ಲಿಕೇಶನ್ ಸಾಫ್ಟ್‌ವೇರ್, ಫರ್ಮ್‌ವೇರ್ ಮತ್ತು ಮೆಕ್ಯಾನಿಕಲ್ ಕ್ಷೇತ್ರಗಳಲ್ಲಿನ ವ್ಯಾಪಕ ಕೊಡುಗೆಗಳನ್ನು ಸಹ ಈ ಸಂಗ್ರಹ ಒಳಗೊಂಡಿರುತ್ತದೆ.

**ಏರೋ ಶೊ–2019ರ ಆವೃತ್ತಿಯಲ್ಲಿ ಪ್ರದರ್ಶನಗೊಳ್ಳಲಿರುವ ರಂಗಸನ್ಸ್‌ರವರ ಇತರ ಪ್ರಮುಖ ಉತ್ಪನ್ನಗಳೆಂದರೆ:**

- **ಉಷ್ಣ ನಿರ್ವಹಣಾ ಪರಿಹಾರಗಳು:** ಕಾಂಪ್ಯಾಕ್ಟ್ ಏರ್‌ಬೋರ್ನ್ ಹೀಟ್ ಎಕ್ಸ್‌ಚೇಂಜರ್‌ಗಳನ್ನು ಜಾಗತಿಕ ಗುಣಮಟ್ಟದಲಿ ಆಂತರಿಕವಾಗಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಲಾಗಿದೆ. ಹೀಟ್ ಎಕ್ಸ್‌ಚೇಂಜರ್‌ಗಳು ಕಡಿಮೆ ವೆಚ್ಚದ್ದಾಗಿದ್ದು, ವಿಶ್ವದರ್ಜೆಯ ಗುಣಮಟ್ಟವನ್ನು ಹೊಂದಿವೆ. ಜಾಗತಿಕ ಏರೋಸ್ಪೇಸ್ ಮತ್ತು ರಕ್ಷಣಾ ಮಾರುಕಟ್ಟೆಯನ್ನು ಗುರಿಯಾಗಿರಿಸಿಕೊಂಡಿರುವ ಈ ಉತ್ಪನ್ನಗಳು ಭಾರತೀಯ ಮಿಲಿಟರಿ ಗ್ರಾಹಕರಿಂದ ಮಾನ್ಯತೆ ಪಡೆದಿವೆ. ರಂಗಸನ್ಸ್ ಏರ್–ಟು–ಏರ್ ಮತ್ತು ಲಿಕ್ವಿಡ್–ಟು–ಏರ್ ಆವೃತ್ತಿಗಳೊಂದಿಗೆ ವಿಶೇಷ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿದೆ.

- **ಉಪಗ್ರಹ ಸಂಪರ್ಕಗಳು:** ಸ್ಯಾಟ್‌ಕಾಮ್ ಆನ್ ದ ಮೂವ್(SOTM)/ ಕಮ್ಯುನಿಕೇಶನ್ ಆನ್ ದ ಮೂವ್(COTM) ಪರಿಹಾರಗಳು ಜಗತ್ತಿನ–ಅತ್ಯುತ್ತಮ ದಕ್ಷತೆಗಳನ್ನು ಒಂದು ಪುಟ್ಟ ವೇದಿಕೆಯಲ್ಲಿ ಒಂದುಗೂಡಿಸುತ್ತಿವೆ. ಅಳವಡಿಕೆ ಮತ್ತು ನಿರ್ವಹಣೆ ಸುಲಭ, ಕನಿಷ್ಠ ರಚನಾತ್ಮಕ ಮಾರ್ಪಾಡುಗಳೊಂದಿಗೆ ಯಾವುದೇ ಏರ್‌ಬೋರ್ನ್ ವೇದಿಕೆಯಲ್ಲಿ ಇದನ್ನು ಮರುಪ್ರಸಾರಗೊಳಿಸಬಹುದು. 10MBPSನಿಂದ ಹಿಡಿದು 40MBPSವರೆಗಿನ ಡೇಟಾವನ್ನು ಸ್ಟ್ರೀಮ್ ಮಾಡುವ ಸಾಮರ್ಥ್ಯವಿರುವ ಈ ಸ್ಯಾಟ್‌ಕಾಮ್ ಅನ್ನು ಅಭೂತಪೂರ್ವ ವೆಚ್ಚ–ದಕ್ಷತೆಗಳೊಂದಿಗೆ ಭಾರತದಲ್ಲಿ ತಯಾರಿಸಲಾಗಿದೆ. ಆಡಿಯೋ ಮತ್ತು ವಿಡಿಯೋದೊಂದಿಗೆ ರಕ್ಷಣಾ ಸಂವಹನಗಳಿಗಾಗಿ ಇದು ಅತ್ಯುತ್ತಮ ಆಯ್ಕೆಯಾಗಿದೆ ಮತ್ತು ಸಣ್ಣ ವ್ಯಾಪಾರಿ ಜೆಟ್‌ಗಳಿಗಾಗಿ ವೈ–ಫೈ ಅನ್ನು ಒಳಗೊಂಡಿದೆ.

- **ಯುದ್ಧತಂತ್ರದ ಸಂವಹನಗಳು:** ಟ್ಯಾಕ್ಟಿಕಲ್ (ಯುದ್ಧತಂತ್ರದ) ಡಾಟಾಲಿಂಕ್ ಉತ್ಪನ್ನಗಳು ಏರ್–ಏರ್&ಏರ್–ಗ್ರೌಂಡ್ ಸಂಪರ್ಕಗಳಿಗೆ ಕಮಾಂಡ್ ಮತ್ತು ಕಂಟ್ರೋಲ್ ಇಂಟಿಗ್ರೇಷನ್ ವೈಶಿಷ್ಟ್ಯಗಳನ್ನು ಹೊಂದಿರುವ ಒಂದು ಅನನ್ಯ ಸಾಮರ್ಥ್ಯವನ್ನು ಒಗ್ಗೂಡಿಸುತ್ತವೆ. ಏರ್‌ಬೋರ್ನ್ ಐಎಸ್‌ಆರ್ ಅಪ್ಲಿಕೇಶನ್ ಮತ್ತು ನೆಟ್‌ವರ್ಕ್‌ನ ಮಾನವರಹಿತ ವೈಮಾನಿಕ ವ್ಯವಸ್ಥೆಗಳಿಗಾಗಿ ವಿಶ್ವದರ್ಜೆಯ ಉತ್ಪನ್ನದ ವೈಶಿಷ್ಟ್ಯಗಳೊಂದಿಗೆ ಇವುಗಳನ್ನು ಭಾರತದಲ್ಲಿ ತಯಾರಿಸಲಾಗಿದೆ.

- **ಏವಿಯೇಷನ್ ಟ್ಯೂಬ್‌ಗಳು & ಹೋಸ್‌ಗಳು:** ಪ್ರಪಂಚದಲ್ಲಿ ಇದು ಮೊದಲನೇಯದು, ಈ ಟ್ಯೂಬ್ ಮತ್ತು ಹೋಸ್ ಉತ್ಪನ್ನಗಳು ವೆಚ್ಚ ಮತ್ತು ಪ್ರಕ್ರಿಯೆಗಳನ್ನು ಒಟ್ಟಿಗೇ ತರುವ ಜೊತೆಗೆ, ವಿಮಾನಯಾನ ಅಪಧಮನಿಗಳನ್ನು ರಚಿಸುವ ಒಂದು ಸ್ಥಾಪಿತ ಮಾರುಕಟ್ಟೆಯಲ್ಲಿ

ಸೇವಾನಿರತವಾಗಿವೆ. ಈ ಉತ್ಪನ್ನಗಳು ವಿಶೇಷ ಪ್ರಕ್ರಿಯೆಗಳಿಗಾಗಿ NADCAP ಪ್ರಮಾಣೀಕರಣಗಳೊಂದಿಗೆ ಜಾಗತಿಕ ಏರೋ-ಎಂಜಿನ್ ಮಾರುಕಟ್ಟೆಗೆ ಪರಿಪೂರ್ಣವಾದ ಕಾರ್ಯವಿಧಾನಗಳಾಗಿವೆ. ಇದರಲ್ಲಿ ಟ್ಯೂಬ್‌ಗಳು, ಹೋಸ್‌ಗಳು, ಮ್ಯಾನಿಫೋಲ್ಡ್‌ಗಳು ಒಳಗೊಂಡಿವೆ.

**ಏರೋ ಶೋ-2019ರಲ್ಲಿ ಭಾಗವಹಿಸುತ್ತಿರುವ ಸಂತಸವನ್ನು ಹಂಚಿಕೊಂಡ ರಂಗಸನ್ಸ್ ಡಿಫೆನ್ಸ್ ಸಲ್ಯುಷನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಪವನ್ ರಂಗ,** 'ಏರೋ ಇಂಡಿಯಾ 2019 ರಕ್ಷಣಾ ಪರಿಹಾರದಲ್ಲಿ ಭಾರತದ ಸಾಮರ್ಥ್ಯಗಳನ್ನು ಪ್ರದರ್ಶಿಸಲು ಇರುವ ಒಂದು ಪ್ರಮುಖ ವೇದಿಕೆಯಾಗಿದೆ. ಹೋಮ್‌ಲ್ಯಾಂಡ್ ಸೆಕ್ಯುರಿಟಿ, ಅಂತರಿಕ್ಷಯಾನ (ಏರೋಸ್ಪೇಸ್) ಮತ್ತು ದೇಶದ ರಕ್ಷಣೆಗೆ ಉತ್ತಮ ಪರಿಹಾರ ನೀಡಲು ಒಂದು ಉತ್ಪನ್ನ ತಂತ್ರಜ್ಞಾನ ಕಂಪನಿಯಾಗಿ ನಾವು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೆಮ್ಮೆ ಮತ್ತು ಸಂತಸ ಪಡುತ್ತೇವೆ. ಅಲ್ಲಿ ನಮ್ಮ ನವೀನ ವಿನ್ಯಾಸ ಚಿಂತನೆ ಮತ್ತು ಸುಧಾರಿತ ತಂತ್ರಜ್ಞಾನದ ಪರಿಹಾರಗಳು ಉದ್ಯಮದ ಮೌಲ್ಯಯುತ ಗ್ರಾಹಕರನ್ನು ಸೆಳೆಯಲಿವೆ. ಭಾರತದಲ್ಲಿ, ಅದರಲ್ಲೂ ಬೆಂಗಳೂರಿನಲ್ಲಿ ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ತಯಾರಿಕಾ ತಂತ್ರಜ್ಞಾನದಲ್ಲಿನ ನಮ್ಮ ಪರಿಣತಿಯನ್ನು ನಾವು ಯಶಸ್ವಿಯಾಗಿ ಪ್ರದರ್ಶಿಸಿದ್ದೇವೆ. ಈ ಪ್ರದರ್ಶನ ನಮ್ಮ ಮತ್ತೊಂದು ಹೆಜ್ಜೆಯಾಗಿದೆ" ಎಂದು ಅಭಿಪ್ರಾಯಪಟ್ಟರು.

ಮುಂದುವರಿದು ಮಾತನಾಡಿದ ಅವರು, "ನಾವು ಜಾಗತಿಕ ಮಾನದಂಡಗಳ ಪ್ರಕಾರ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ವಿನ್ಯಾಸಗೊಳಿಸಲು ನಮ್ಮ ಶ್ರಮ ಮತ್ತು ಶಕ್ತಿಯನ್ನು ವಿನಿಯೋಗಿಸುತ್ತ ಬಂದಿದ್ದೇವೆ. ರಕ್ಷಣಾ ಮತ್ತು ಅಂತರಿಕ್ಷ ಪರಿಹಾರಗಳಿಗೆ ಸಂಬಂಧಿಸಿದಂತೆ ಭಾರತವು ಸ್ವಾವಲಂಬಿಯಾಗಲು ನಮ್ಮ ಸೇವೆ ಮತ್ತು ಉತ್ಪನ್ನಗಳು ನೆರವಾಗಬೇಕೆಂಬ ಉದ್ದೇಶಕ್ಕೆ ನಾವು ಬದ್ಧರಾಗಿದ್ದೇವೆ" ಎಂದರು.

ರಂಗಸನ್ಸ್ ಡಿಫೆನ್ಸ್ ಸಲ್ಯುಷನ್ಸ್ ರಕ್ಷಣಾ ಸಾಮಗ್ರಿಗಳ ಖಾಸಗಿ ಪಾಲ್ಗೊಳ್ಳುವಿಕೆಯ ಆಧಾರದ ಮೇಲೆ MOD/ಸ್ಟ್ಯಾಂಡಿಂಗ್ ಕಮಿಟಿಯಿಂದ ಕೈಗಾರಿಕಾ ಪರವಾನಗಿ ಪಡೆದಿದೆ. ಹಾಗೆಯೇ ಗ್ಲೋಬಲ್ OEM, DPSU ಕಾರ್ಯಕ್ಷಮತೆ ಮತ್ತು CEMILAC ಪ್ರಮಾಣಪತ್ರ ಸೇರಿದಂತೆ ಕಂಪನಿಯು ಹಲವಾರು ಪ್ರಮಾಣೀಕರಣಗಳನ್ನು ಹೊಂದಿದೆ.

---

## ರಂಗಸನ್ಸ್ ಡಿಫೆನ್ಸ್ ಸಲ್ಯುಷನ್ಸ್ ಕುರಿತು (ಆರ್‌ಡಿಎಸ್)

ಎನ್‌ಆರ್ ಸಮೂಹದ ಒಂದು ಭಾಗವಾದ ರಂಗಸನ್ಸ್ ಡಿಫೆನ್ಸ್ ಸಲ್ಯುಷನ್ಸ್ ಏರೋಸ್ಪೇಸ್, ಡಿಫೆನ್ಸ್ ಮತ್ತು ಹೋಮ್‌ಲ್ಯಾಂಡ್ ಸೆಕ್ಯುರಿಟಿ ಉತ್ಪನ್ನಗಳನ್ನು ತಯಾರಿಸುವ ಭಾರತದ ಪ್ರಮುಖ ತಂತ್ರಜ್ಞಾನ ಸಂಸ್ಥೆಯಾಗಿದೆ. ಇದು ಯಾವುದೇ ಏರ್‌ಬೋರ್ನ್ ಕಾಂಪ್ಯಾಕ್ಟ್ ಹೀಟ್ ಎಕ್ಸ್‌ಚೇಂಜರ್ ತಯಾರಿಸಿದ ಮೊದಲ ಭಾರತೀಯ ಕಂಪನಿಯಾಗಿದೆ. ಪ್ರಪಂಚದ ಅತ್ಯಂತ ಚಿಕ್ಕ ಸ್ಯಾಟ್‌ಕಾಮ್ ಆಂಟೆನಾ ಟರ್ಮಿನಲ್ ಹೊಂದಿರುವುದು ಇದರ ಮತ್ತೊಂದು ಶ್ರೇಷ್ಠತೆಯಾಗಿದೆ. ಅಮೆರಿಕ, ಇಂಗ್ಲಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಇದು ತನ್ನ ಜಾಗತಿಕ ಮಾರಾಟ ಜಾಲವನ್ನು ಹೊಂದಿದೆ. HAL, DRDO, BELನಂತಹ ಅನೇಕ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂಸ್ಥೆಗಳೊಂದಿಗೆ ವ್ಯವಹಾರದ ಸಂಬಂಧವನ್ನು ಹೊಂದಿದೆ. ಕಡಿಮೆ ಸಮಯದಲ್ಲಿ ಸಂಕೀರ್ಣ ಕಾರ್ಯಕ್ರಮಗಳನ್ನು ಸುಲಭವಾಗಿ ಒದಗಿಸುವ ಸಾಮರ್ಥ್ಯವನ್ನು ಹೊಂದಿದ್ದು, ಇದಕ್ಕಾಗಿ ತನ್ನ ಗ್ರಾಹಕರಿಂದ ಪ್ರಶಂಸೆಗಳನ್ನು ಪಡೆದ ಹೆಮ್ಮೆ ಆರ್‌ಡಿಎಸ್‌ಗೆ ಇದೆ.